DAC – 550

# ತೃತೀಯ ಬಿ.ಎ. ಪದವಿ ಪರೀಕ್ಷೆ, ಸಪ್ಟೆಂಬರ್/ಅಕ್ಟೋಬರ್ 2012

## ಅಂಚೆ ಮತ್ತು ತೆರಪಿನ ಶಿಕ್ಷಣ

## Directorate of Distance Education

(ಹೊಸಬರಿಗೆ/ಹಳಬರಿಗೆ)

## ಬಸವ ತತ್ವ

## ಪತ್ರಿಕೆ – ೫ : ಶರಣರ ಆಂದೋಲನಗಳು ಹಾಗೂ ಹೊಸ ಸಮಾಜದ ಪರಿಕಲ್ಪನೆ

ಸಮಯ : 3 ಗಂಟೆಗಳು ಅಂಕಗಳು : 70/80

***ಸೂಚನೆಗಳು :*** *1)* ***30*** *ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು* ***70*** *ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*2)* ***20*** *ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು* ***80*** *ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*3)* ***ವಿಶೇಷ ಸೂಚನೆ:*** *ಹೊಸಬರು* ***ಡಿ*** *– ವಿಭಾಗದ ಪ್ರಶ್ನೆಯನ್ನು* ***ಕಡ್ಡಾಯವಾಗಿ*** *ಉತ್ತರಿಸಬೇಕು.*

### ವಿಭಾಗ – ಎ

I. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **(2×5=10)**

ಅ) ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯ ?
ಹೊಲೆಯ ಹೊರಕೇರಿಯಲ್ಲಿರುವನು ಊರೊಳಗಿಲ್ಲವೆ ಅಯ್ಯಾ ಹೊಲೆಯರು ?
ತಾಯಿಗೆ ಬೈದವನೇ ಹೊಲೆಯ ತಂದೆಗೆ ಉತ್ತರ ಕೊಟ್ಟವನೇ ಹೊಲೆಯ ...

ಆ) ಉಂಡೆನುಟ್ಟೆನೆಂಬ ಸಂದೇಹ ನಿನಗೇಕಯ್ಯಾ
ಉಂಬುದೆ ಅಗ್ನಿ ? ಉಡುವುದೇ ಪೃಥ್ವಿ ?
ನೀನೆಂದು ಉಂಡೆ ? ನಾನೆಂದು ಕಂಡೆ ?
ಉಣ್ಣದೆ ಉಡದೆ ಹೋಗೆಯ ಕೈಯಲ್ಲಿ
ಸತ್ತನೆಂಬ ಅಂಜಿಕೆ ನಿನಗೆ ಬೇಡ

ಇ) ವ್ಯಾಸ ಬೋವಿತಿಯ ಮಗ ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ,
ಕಸ್ಯಪ ಕಮ್ಮಾರ ಕೌಂಡಿನ್ಯನೆಂಬ ಋಷಿ
ಮೂರು ಭುವನವರಿಯೆ ನಾವಿದ ಕಾಣಿಂ ಭೋ,
ನಮ್ಮ ಕೂಡಲಸಂಗನ ಶರಣವಚನವಿಂತೆಂದುದು.

P.T.O.

## ವಿಭಾಗ – ಬಿ

II. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : (4×10=40)

ಅ) ಶರಣರ ಆಂದೋಲನದ ಪೂರ್ವಸ್ಥಿತಿಯ ಬಗ್ಗೆ ವಿವರಿಸಿ.

ಆ) ''ಪತಿವ್ರತೆಗೆ ಗಂಡನೊಬ್ಬನೆ ಎಂಬಂತೆ, ದೇವರು ಕೂಡಾ ಒಬ್ಬನೇ'' ಎಂದು ಶರಣರು ಹೇಗೆ ವಿವರಿಸಿದ್ದಾರೆ ?

ಇ) ಶರಣರ ಹೊಸ ಸಮಾಜದ ಪರಿಕಲ್ಪನೆಯನ್ನು ಉದಾಹರಣೆಯೊಂದಿಗೆ ವಿವರಿಸಿ.

ಈ) ಶರಣರು ಗುರು ಶಿಷ್ಯರಿಬ್ಬರಲ್ಲಿಯೂ ನಿಷ್ಠೆ ಚಾರಿತ್ರ್ಯಗಳು ಅವಶ್ಯವಾಗಿರಬೇಕೆಂಬುದನ್ನು ಹೇಗೆ ಲೋಕಕ್ಕೆ ತಿಳಿಸಿದ್ದಾರೆ.

ಉ) ಸ್ತ್ರೀಯರ ಸ್ವಾತಂತ್ರ್ಯವನ್ನು ಕುರಿತು ಶರಣ ಶರಣೆಯರು ದನಿ ಎತ್ತಿದ ಪರಿಯನ್ನು ವಿವರಿಸಿ.

## ವಿಭಾಗ – ಸಿ

III. ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ : (4×5=20)

ಅ) ಡಂಭಾಚಾರ

ಆ) ಶರಣರು ಪ್ರತಿಭಟಿಸಿದ ಕರ್ಮಕಾಂಡ

ಇ) ಜಾತ್ಯಾತೀತ ಸಮಾಜ

ಈ) ಹೊಸ ಸಮಾಜದ ಸತಿಪತಿ

ಉ) ಶರಣರ ನಿಲುವು.

## ವಿಭಾಗ – ಡಿ

**ವಿಶೇಷ ಸೂಚನೆ**: ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು : (1×10=10)

ಅ) ವಚನಕಾರರು ಬಸವಣ್ಣನ ಮುಖಂಡತ್ವದಲ್ಲಿ ಹೊಸ ಸಮಾಜವನ್ನು ಕಟ್ಟ ಬಯಸಿದ ಪರಿಯನ್ನು ಇತರ ಚಿಂತಕರ ಉದಾಹರಣೆಯೊಂದಿಗೆ ವಿವರಿಸಿ.